ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 08-09-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಸಾವಯವ ಉತ್ಪನ್ನಗಳ ಹಾಗೂ ಸಿರಿಧಾನ್ಯಗಳ ಕುರಿತು ಗ್ರಾಹಕರಿಗೆ ಜಾಗೃತಿ ಮೂಡಿಸಲು – ಸಾವಯವ ಹಾಗೂ ಸಿರಿಧಾನ್ಯ ಮೇಳ :<br>ಉದ್ಘಾಟನೆ:<br>ಕೃಷ್ಣಭೈರೇಗೌಡ.<br>ಕೃಷಿ ಸಚಿವರು<br>ಅಧ್ಯಕ್ಷತೆ:<br>ಆರ್. ರೋಷನ್ ಬೇಗ್,<br>ನಗರಾಭಿವೃದ್ಧಿ ಹಾಗೂ ಹಜ್ ಸಚಿವರು. | 10-09-2016<br>ಶನಿವಾರ<br>ಬೆಳಿಗ್ಗೆ<br>11-00 ಗಂಟೆಗೆ | ಬ್ಯಾಂಡ್ ಸ್ಟ್ಯಾಂಡ್ ಎದುರು, ವೆಂಕಟಪ್ಪ ಆರ್ಟ್ ಗ್ಯಾಲರಿ ಹಿಂಭಾಗ, ಕಬ್ಬನ್ ಪಾರ್ಕ್, ಬೆಂಗಳೂರು. |
| 2. | ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ -2016 :<br>ಮುಖ್ಯ ಅತಿಥಿಗಳು:<br>ಬಿ. ರಮಾನಾಥ ರೈ,<br>ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ | 11-09-2016<br>ಭಾನುವಾರ<br>ಬೆಳಿಗ್ಗೆ<br>10-00 ಗಂಟೆಗೆ | ಅರಣ್ಯ ಭವನ,<br>18ನೇ ಅಡ್ಡರಸ್ತೆ, ಮಲ್ಲೇಶ್ವರಂ<br>ಬೆಂಗಳೂರು |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

## ಇಲಾಖಾ ಪರೀಕ್ಷೆ : ಬದಲಾದ ವೇಳಾಪಟ್ಟಿ

ಬೆಂಗಳೂರು ಸೆಪ್ಟೆಂಬರ್ 8 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2016 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಈಗಾಗಲೇ ಅರ್ಜಿ ಆಹ್ವಾನಿಸಿ ಅಧಿಸೂಚನೆ ಹೊರಡಿಸಿದ್ದು, ಕಾರಣಾಂತರಗಳಿಂದ ಕೆಲವು ಇಲಾಖಾ ಪರೀಕ್ಷೆಗಳ ವಿಷಯಗಳನ್ನು ಮುಂದೂಡಲಾಗಿದ್ದು ಹಾಗೂ ಕೆಲವು ವಿಷಯಗಳ ಇಲಾಖಾ ಪರೀಕ್ಷೆಗಳನ್ನು ಹಿಂದೂಡಲಾಗಿರುತ್ತದೆ ಎಂದು ಆಯೋಗದ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಸೆಪ್ಟೆಂಬರ್ 2 ರಂದು ಅಖಿಲ ಭಾರತ ಕಾರ್ಮಿಕ ಮುಷ್ಕರಕ್ಕೆ ಕರೆ ಕೊಟ್ಟ ಹಿನ್ನೆಲೆಯಲ್ಲಿ ಅಂದು ನಡೆಯಬೇಕಿದ್ದ ಇಲಾಖಾ ಅಧಿವೇಶನ ಪರೀಕ್ಷೆಯನ್ನು ಸೆಪ್ಟೆಂಬರ್ 19 ರಂದು ನಡೆಸಲಾಗುವುದು, ಸೆಪ್ಟೆಂಬರ್ 9 ರಂದು ಕಾವೇರಿ ಜಲ ವಿವಾದದ ಸಂಬಂಧ ಕನ್ನಡ ಪರ ಸಂಘಟನೆಗಳು ಕರ್ನಾಟಕ ಬಂದ್‌ಗೆ ಕರೆ ಕೊಟ್ಟ ಹಿನ್ನೆಲೆಯಲ್ಲಿ ಅಂದು ನಡೆಯಬೇಕಿದ್ದ ಪರೀಕ್ಷೆಯನ್ನು ಸೆಪ್ಟೆಂಬರ್ 20 ರಂದು ಹಾಗೂ ಬಕ್ರೀದ್ ಹಬ್ಬ ಸೆಪ್ಟೆಂಬರ್ 12 ರ ಬದಲು ಸೆಪ್ಟೆಂಬರ್ 13 ರಂದು ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಅಂದು ನಡೆಯಬೇಕಿದ್ದ ಇಲಾಖಾ ಅಧಿವೇಶನ ಪರೀಕ್ಷೆಯನ್ನು ಹಿಂದೂಡಿ ಸೆಪ್ಟೆಂಬರ್ 12 ರಂದು ನಡೆಸಲು ಉದ್ದೇಶಿಸಲಾಗಿದೆ.

ಅಭ್ಯರ್ಥಿಗಳು ಈಗಾಗಲೇ ಆಯೋಗದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡಿರುವ ಪ್ರವೇಶ ಪತ್ರಗಳನ್ನೇ ಹಾಜರುಪಡಿಸಿ ಹಂಚಿಕೆ ಮಾಡಲಾದ ಸಂಬಂಧಿಸಿದ ಪರೀಕ್ಷಾ ಉಪಕೇಂದ್ರಗಳಲ್ಲಿಯೇ ಹಾಜರಾಗಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗದ ದುರವಾಣಿ ಸಂಖ್ಯೆ 080–30574944/45/30575153/22268356 ಗಳನ್ನು ಸಂಪರ್ಕಿಸಲು ಹಾಗೂ ಆಯೋಗದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ.

ಮಮತಾ:ಜಿಪಿಆರ್

## ದಾಖಲೆ ಪರಿಶೀಲನೆ – ಅವಧಿ ಮುಂದೂಡಿಕೆ

ಬೆಂಗಳೂರು ಸೆಪ್ಟೆಂಬರ್ 8 (ಕರ್ನಾಟಕ ವಾರ್ತೆ)

ಪೌರಾಡಳಿತ ನಿರ್ದೇಶನಾಲಯದ ಮಹಾನಗರ ಪಾಲಿಕೆಯ ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನಿಗದಿಯಾಗಿದ್ದ ಮೂಲ ದಾಖಲೆಗಳ ಪರಿಶೀಲನಾ ಕಾರ್ಯವನ್ನು ಸೆಪ್ಟೆಂಬರ್ 13 ರ ಬದಲಿಗೆ ಸೆಪ್ಟೆಂಬರ್ 14, 2016 ರಂದು ನಡೆಸಲಾಗುವುದು ಎಂದು ಕರ್ನಾಟಕ ಲೋಕಸೇವಾ ಆಯೋಗದ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್) 47 ಹುದ್ದೆಗಳು ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರ 13 ಹುದ್ದೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿ – 15 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯನ್ನು ನಡೆಸಲಾಗುವುದು.

ಅರ್ಹ ಅಭ್ಯರ್ಥಿಗಳಿಗೆ ಪರಿಷ್ಕೃತ ಸೂಚನಾ ಪತ್ರಗಳನ್ನು ಕಳುಹಿಸಲಾಗಿದ್ದು, ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ, ಪರಿಷ್ಕೃತ ವೇಳೆ ಮತ್ತು ದಿನಾಂಕ, ಇತ್ಯಾದಿ ಮಾಹಿತಿಗಾಗಿ ಆಯೋಗದ ಅಂತರ್ಜಾಲ ತಾಣ "http://kpsc.kar.nic.in/Eligibility List" ನ್ನು ನೋಡಬಹುದು. ಅರ್ಹ ಅಭ್ಯರ್ಥಿಗಳು ಸೂಚನಾ ಪತ್ರ ಸ್ವೀಕೃತವಾಗದಿದ್ದಲ್ಲಿ ಸಂಬಂಧಿತ ದಾಖಲೆಗಳೊಂದಿಗೆ ಕೇಂದ್ರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಮಮತಾ :ಜಿಪಿಆರ್

# ಪೂರ್ವಭಾವಿ ಪರೀಕ್ಷೆ ಪ್ರವೇಶ ಪತ್ರ

ಬೆಂಗಳೂರು, ಸೆಪ್ಟೆಂಬರ್ 8(ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಲೋಕಸೇವಾ ಆಯೋಗವು ದಿನಾಂಕ: 18-9-2016 ರಂದು ನಡೆಸುವ ಕರ್ನಾಟಕ ರಾಜ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗ್ರೂಫ್ 'ಎ' ವೃಂದದ ಒಟ್ಟು 25 ಹುದ್ದೆಗಳ ಪೂರ್ವಭಾವಿ ಪರೀಕ್ಷೆಯ ಪ್ರವೇಶ ಪತ್ರವನ್ನು ಅಭ್ಯಥಿಗಳು ತಮಗೆ ರವಾನಿಸಲಾಗಿರುವ ತಮ್ಮ ಅರ್ಜಿಯ ಲಾಗ್ಇನ್ ಐ.ಡಿ. ಮತ್ತು ಪಾಸ್ವರ್ಡ್‌ನ್ನು ಬಳಸಿ ಆಯೋಗದ ವೆಬ್‌ಸೈಟ್(http://kpsc.kar.nic.in)ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಪೂರ್ವಭಾವಿ ಪರೀಕ್ಷೆಯನ್ನು ಗಣಕಯಂತ್ರದ ಮೂಲಕ ನೇಮಕಾತಿ ಪರೀಕ್ಷೆ (**Computer Based Recruitment Test-CBRT**) ಮುಖಾಂತರ ನಡೆಸಲು ಆಯೋಗವು ತೀರ್ಮಾನಿಸಿರುತ್ತದೆ. ಅಭ್ಯರ್ಥಿಗಳಿಗೆ ಈ ಸಂಬಂಧ ಸೂಚನೆಗಳನ್ನು ಹಾಗೂ ಅಣುಕು ಪರೀಕ್ಷೆಯನ್ನು (**Mock Test**) ತೆಗೆದುಕೊಳ್ಳುವ ಬಗ್ಗೆ ಮಾಹಿತಿಯನ್ನು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

ಪೂರ್ವಭಾವಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ಯಾವುದಾದರೂ ಒಂದು ಮೂಲ ಗುರುತಿನ ಚೀಟಿ (**Original Identification Card**) (**Passport/PAN Card/Voter I.D./Adhar U.I.D/Government Employer ID./Driving License**) ನಕಲು ಪ್ರತಿ ಅಥವಾ ಸ್ಕ್ಯಾನ್ ಮಾಡಿರುವ ಪ್ರತಿಯನ್ನು ಅನುಮತಿಸಲಾಗುವುದಿಲ್ಲ. ಈ ಮೇಲೆ ಸೂಚಿಸಿರುವ ಒಂದು ಮೂಲ ಗುರುತಿನ ಚೀಟಿಯನ್ನು ಹಾಜರುಪಡಿಸದಿದ್ದಲ್ಲಿ ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗುವುದಿಲ್ಲವೆಂದು ಆಯೋಗದ ಪ್ರಕಟಣೆ ತಿಳಿಸಿದೆ.

ಮಮತಾ :ಕೆಎಂ

## ಸೆಪ್ಟೆಂಬರ್ 14 ರಂದು ಕರ್ನಾಟಕ ವಿಧಾನ ಸಭೆ ಅಧಿವೇಶನ

ಬೆಂಗಳೂರು ಸೆಪ್ಟೆಂಬರ್ 8 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯು ಬುಧವಾರ. ದಿನಾಂಕ 14 ನೇ ಸೆಪ್ಟೆಂಬರ್, 2016 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರಿನ ವಿಧಾನ ಸೌಧದಲ್ಲಿರುವ "ವಿಧಾನ ಸಭೆಯ ಸಭಾಂಗಣ" ದಲ್ಲಿ ಸೇರಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಮಮತಾ :ಕೆಎಂ

## KSTDC conducting package tours

**Bangalore, September 8 (Karnataka Information)**

Karnataka State Tourism Development Corporation (KSTDC) is conducting a package tours to Goa and North Karnataka during October 2016 to January 2017 Beach tour like Goa, Gokarna Departure Every Thursday Arrival by Monday morning with AC Super Deluxe Bus Fare is

Rs. 5,600/-, and Heritage tours like North Karnataka, Hampi, Aihole, Pattadakallu, Badami, Vijayapura Departure Every Thursday Arrival by Monday morning with AC Super Deluxe Bus Fare is Rs. 4,100/- The tour commences at Badami House. For More information please go through our website www.karnatakaholidays.net or please contact: Manager(Transport), Badami House, Opp: BBMP, City Corporation, Phone No's: 43344334, 22275869, 8970650070, Tourism House Phone No's: 43464351, 43464352, Head Office Phone No's: 22352901, 902 & 903.

## ಕೆ.ಎಸ್.ಟಿ.ಡಿ.ಸಿ. ಯಿಂದ ಕಡಲತೀರದ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 8(ಕರ್ನಾಟಕ ವಾರ್ತೆ)**

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ದಸರಾ ಹಾಗೂ ದೀಪಾವಳಿ ಪ್ರಯುಕ್ತ ಅಕ್ಟೋಬರ್ 2016 ರಿಂದ ಜನವರಿ 2017 ರವರೆಗೆ ಕಡಲ ತೀರದ ಪ್ರವಾಸ ಮತ್ತು ಪಾರಂಪರಿಕ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದ್ದು, ಕಡಲ ತೀರದ ಪ್ರವಾಸವಾದ ಗೋವಾ, ಗೋಕರ್ಣ ದರ ರೂ 5,600/– ಎಸಿ ವಾಹನದಲ್ಲಿ ಮತ್ತು ಪಾರಂಪರಿಕ ಪ್ರವಾಸವಾದ ಉತ್ತರ ಕರ್ನಾಟಕದ ಹಂಪೆ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ವಿಜಯಪುರ ಪ್ರವಾಸದ ದರ ರೂ 4,100/– ಎಸಿ ವಾಹನದಲ್ಲಿ ಪ್ರತಿ ಗುರುವಾರದಂದು ಹೊರಟು ಸೋಮವಾರದಂದು ಹಿಂದಿರುಗುವುದು. ಹಾಗೂ ಇದಲ್ಲದೆ ನಿಗಮದಿಂದ ಪ್ರವಾಸ ಹಾಗೂ ವಸತಿ ಕಾಯ್ದಿರಿಸುವ ವ್ಯವಸ್ಥೆಯೂ ಇದ್ದು ಹೆಚ್ಚಿನ ವಿವರವನ್ನು ನಮ್ಮ ನಿಗಮದ ವೆಬ್‌ಸೈಟ್ ಆದ www.karnatakaholidays.net ನಿಂದ ಪಡೆದುಕೊಳ್ಳಬಹುದು.**

**ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು –(ಸಾ), ಕ.ರಾ.ಪ್ರ.ಅ.ನಿ.ನಿ., ಬಾದಾಮಿ ಹೌಸ್, ಮಹಾನಗರಪಾಲಿಕೆ ಎದುರು, ದೂರವಾಣಿ ಸಂಖ್ಯೆ: 4334434, 22275869, 8970650070, ಟೂರಿಸಂ ಹೌಸ್ ದೂರವಾಣಿ ಸಂಖ್ಯೆ 43464351, 43464352, ಕೇಂದ್ರ ಕಚೇರಿ ದೂರವಾಣೀ ಸಂಖ್ಯೆ: 22352901, 902,903 ರೈಲು ನಿಲ್ದಾಣ :22870068, ಕೇಂಪೇಗೌಡ ಬಸ್ ನಿಲ್ದಾಣ 8970650075.**